ಅಧ್ಯಕ್ಷರು: ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಹಾಗೂ ಉತ್ತರಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

3) ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು) ಅವರ ಹೆಸರಿನ ಮುಂದಿರುವ ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ನಿಯಂತ್ರಕರು ಹಾಗೂ ಮಹಾಲೇಖಪಾಲಕರು ನೀಡಿರುವ ಕರ್ನಾಟಕ ಸರ್ಕಾರದ ದಿನಾಂಕ 31ನೇ ಮಾರ್ಚಿ, 1999ರ ಅಂತ್ಯದವರೆಗಿನ (ವಾಣಿಜ್ಯ) ಸಂಖ್ಯೆ 2 ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಸಭೆಯ ಮುಂದಿಡಲಾದ ಕಾಗದಪತ್ರಗಳ 2ನೇ ಪಟ್ಟಿ

ಶ್ರೀ ಮಲ್ಲಿಕಾರ್ಜು ಖರ್ಗೆ(ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ,

I ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು) ಅವರ ಪರವಾಗಿ

1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮದ 8(3)ನೇ ಪ್ರಕರಣದ ಮೇರೆಗೆ.

1. ಕರ್ನಾಟಕ ನಾಗರೀಕ ಸೇವೆಗಳು (ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಸಿಬ್ಬಂದಿಯನ್ನು ಕರ್ನಾಟಕ ಲೋಕೋಪಯೋಗಿ ಇಂಜಿನೀಯರಿಂಗ್ ಇಲಾಖೆ ಸೇವೆಯಲ್ಲಿ) ವಿಲೀನಗೊಳಿಸಿರುವ (ವಿಶೇಷ) ನಿಯಮಗಳನ್ನು ರಚಿಸುವ ಸಂಬಂಧದಲ್ಲಿ ದಿನಾಂಕ 9-2-2000ದಂದು ಹೊರಡಿಸಿದ ಡಿಪಿಎಆರ್ 10 ಎಸ್ಆರ್‌ಡಿ 98ನೇ ಸಂಖ್ಯೆ ಅಧಿಸೂಚನೆ;

2. ಕರ್ನಾಟಕ ಸರ್ಕಾರ ಸಚಿವಾಲಯ ಸೇವೆ (ನೇಮಕಾತಿ) ನಿಯಮ 1992ಕ್ಕೆ ತಿದ್ದುಪಡಿ ಸಂಬಂಧವಾಗಿ ದಿನಾಂಕ 28-9-99ರಂದು ಹೊರಡಿಸಿದ ಡಿಪಿಎಆರ್ 54 ಎಸ್ಆರ್‌ಡಿ 98ನೇ ಸಂಖ್ಯೆ ಅಧಿಸೂಚನೆ;

3. ಕರ್ನಾಟಕ ನಾಗರೀಕ ಸೇವೆಗಳು (ಕಾರ್ಯ ನಿರ್ವಹಣಾ ವರದಿಗಳು) ನಿಯಮ (2000)ಗಳನ್ನು ರಚಿಸುವ ಸಂಬಂಧದಲ್ಲಿ ದಿನಾಂಕ 29-2-2000ದಂದು ಹೊರಡಿಸಿದ ಡಿಪಿಎಆರ್ 06 ಎಸಿಟಿ 97ನೇ ಸಂಖ್ಯೆ ಅಧಿಸೂಚನೆ;

1956ನ ಕರ್ನಾಟಕ ಸಚಿವರುಗಳ ವೇತನ ಹಾಗೂ ಭತ್ಯೆಗಳ ಅಧಿನಿಯಮ 12(2ಎ) (ಬಿ) ಪ್ರಕರಣದ ಮೇರೆಗೆ.

4. ಮಾನ್ಯ ಪ್ರವಾಸೋದ್ಯಮ ಹಾಗೂ ಹಜ್ ಸಚಿವರಾದ ಶ್ರೀ ಆರ್.ರೋಷನ್‌ಬೇಗ್ ಅವರು ಜರ್ಮನಿ ದೇಶದ ಬರ್ಲಿನ್ ನಗರಕ್ಕೆ ದಿನಾಂಕ 11-3-2000ದಿಂದ 15-3-2000ದವರೆಗೆ ಪ್ರವಾಸ ಕೈಗೊಂಡ ಸಂಬಂಧವಾಗಿ ದಿನಾಂಕ 25-3-2000ದಂದು ಹೊರಡಿಸಿದ ಸಿಆಸುಇ 26 ಶಿಸನೇ 2000ನೇ ಸಂಖ್ಯೆಯ ಆದೇಶ.

5. ಮಾನ್ಯ ಸಾರಿಗೆ ಸಚಿವರಾದ ಶ್ರೀಸಿ.ಆರ್. ಸಗೀರ್ ಅಹ್ಮದ್ ಅವರು ದಿನಾಂಕ 5-4-2000 ದಿಂದ 17-4-2000ದವರೆಗೆ ವಿದೇಶ ಪ್ರವಾಸ ಕೈಗೊಂಡ ಸಂಬಂಧವಾಗಿ ದಿನಾಂಕ 7-4-2000ದಂದು ಹೊರಡಿಸಿದ ಸಿಆಸುಇ 40 ಜಿಎಎಂ 2000ನೇ ಸಂಖ್ಯೆಯ ಆದೇಶ.

1957ರ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆಯ 39ನೇ ಕಲಮಿನ ಮೇರೆಗೆ.

6. ಹೊಸ ಪ್ರವಾಸೋದ್ಯಮ ಘಟಕವು ಮಾರಾಟ ಮಾಡುವ ಆಹಾರ ಪದಾರ್ಥ ಹಾಗೂ ಮದ್ಯಸಾರ ರಹಿತ ಪಾನೀಯಗಳ ಮಾರಾಟದ ಮೇಲೆ ತಕ್ಷಣದಿಂದ ಪಾವತಿಸಬೇಕಾದ ತೆರಿಗೆಗೆ ವಿನಾಯಿತಿ ನೀಡಿ ದಿನಾಂಕ 12-11-99ರಂದು ಹೊರಡಿಸಿದ ಎಫ್‌ಡಿ 70 ಸಿಎನ್‌ಎಲ್ 97(1)ನೇ ಸಂಖ್ಯೆಯ ಅಧಿಸೂಚನೆ;

7. ಕಂಪ್ಯೂಟರ್‌ಗಳ ಹಾಗೂ ಕಂಪ್ಯೂಟರ್‌ಗೆ ಸಂಬಂಧಿಸಿದ ಬಿಡಿ ವಸ್ತುಗಳ ಮಾರಾಟದ ಮೇಲಿನ ತೆರಿಗೆಯನ್ನು ತಕ್ಷಣದಿಂದ ಶೇಕಡ 0.25ರಷ್ಟು ಕಡಿಮೆಗೊಳಿಸಿ ದಿನಾಂಕ 2-3-2000ದಂದು ಹೊರಡಿಸಿದ ಎಫ್‌ಡಿ 262 ಸಿಎಸ್‌ಎಲ್ 99(1)ನೇ ಸಂಖ್ಯೆಯ ಅಧಿಸೂಚನೆ.

8. ದಿನಾಂಕ 30-3-96ರ ಎಫ್‌ಡಿ 35 ಸಿಎಸ್‌ಎಲ್ 96(9)ನೇ ಸಂಖ್ಯೆಯ ಅಧಿಸೂಚನೆಗೆ ತಿದ್ದುಪಡಿ ಮಾಡಿ ದಿನಾಂಕ 14-3-2000ದಂದು ಹೊರಡಿಸಿದ ಎಫ್‌ಡಿ 73 ಸಿಎಸ್‌ಎಲ್ 2000ನೇ ಸಂಖ್ಯೆಯ ಅಧಿಸೂಚನೆ.

9. ಅಧಿಸೂಚನೆ ಸಂಖ್ಯೆ ಎಫ್‌ಡಿ 1 ಸಿಎಸ್‌ಎಲ್ 97(8) ದಿನಾಂಕ 25-1-97ನ್ನು ರದ್ದುಗೊಳಿಸಿ ರಾಯಚೂರು ಜಿಲ್ಲೆಯ ಕೊಪ್ಪಳ ತಾಲ್ಲೂಕಿನ ಜಿಣಿಗೆರ ಗ್ರಾಮದಲ್ಲಿ ಸ್ಥಾಪನೆಯಾಗಿರುವ ಮೆ:ಪ್ರಾಕ್ಸ್ ಏರ್ ಇಂಡಿಯಾ ಲಿಮಿಟೆಡ್ ಸಂಸ್ಥೆಯು ಮಾರಾಟ ಮಾಡುವ ಸಿದ್ಧ ವಸ್ತುಗಳ ಮೇಲಿನ ಮಾರಾಟ ತೆರಿಗೆಯನ್ನು ದಿನಾಂಕ 3-1-97 ರಿಂದ 5 ವರ್ಷಗಳ ಕಾಲ ವಿನಾಯಿತಿ ನೀಡಿ ದಿನಾಂಕ 14-3-2000ದಂದು ಹೊರಡಿಸಿದ ಎಫ್‌ಡಿ 272 ಸಿಎಸ್‌ಎಲ್ 99(1)ನೇ ಸಂಖ್ಯೆ ಅಧಿಸೂಚನೆ.

10. ಅಧಿಸೂಚನೆ ಸಂಖ್ಯೆ ಎಫ್‌ಡಿ 1 ಸಿಎಸ್‌ಎಲ್ 97(8) ದಿನಾಂಕ 25-1-97ನ್ನು ರದ್ದುಗೊಳಿಸಿ ರಾಯಚೂರು ಜಿಲ್ಲೆಯ ಕೊಪ್ಪಳ ತಾಲ್ಲೂಕಿನ ಜಿಣಗೆರ ಗ್ರಾಮದಲ್ಲಿರುವ ಮೆ:ಪ್ರಾಕ್ಸ್ ಏರ್ ಇಂಡಿಯಾ ಲಿಮಿಟೆಡ್ ಸಂಸ್ಥೆಯು ಸಿದ್ಧ ವಸ್ತುಗಳನ್ನು ತಯಾರಿಸಿ ಅಂತರರಾಜ್ಯ ವಾಣಿಜ್ಯ ಮತ್ತು ವಹಿವಾಟಿನ ಮೇಲೆ ಪಾವತಿಸಬೇಕಾದ ಕೇಂದ್ರ ಮಾರಾಟ ತೆರಿಗೆಗೆ ವಿನಾಯಿತಿ ನೀಡಿ ದಿನಾಂಕ 14-3-2000 ರಂದು ಹೊರಡಿಸಿದ ಎಫ್.ಡಿ 272 ಸಿಎಸ್‌ಎಲ್ 99(2)ನೇ ಸಂಖ್ಯೆ ಅಧಿಸೂಚನೆ.

1979ರ ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆಯ 31ನೇ ಪ್ರಕರಣದ ಮೇರೆಗೆ.

11. ದಿನಾಂಕ 17-7-99ರ ಎಫ್‌ಡಿ 82 ಸಿಇಟಿ 99ನೇ ಸಂಖ್ಯೆಯ ಅಧಿಸೂಚನೆಗೆ ತಿದ್ದುಪಡಿ ಮಾಡಿ ದಿನಾಂಕ 15-10-99ರಂದು ಹೊರಡಿಸಿದ ಎಫ್‌ಡಿ 82 ಸಿಇಟಿ 99ನೇ ಸಂಖ್ಯೆ ಅಧಿಸೂಚನೆ.

12. ಕರ್ನಾಟಕ ಸಹಕಾರ ಸಂಘದ ಮಹಿಳಾ ಸಮಕ್ಯ ಇವರು ಸ್ಥಳೀಯ ಪ್ರದೇಶಗಳಿಗೆ ತರುವ ವಾಹನಗಳ ಮೇಲೆ ಪಾವತಿಸಬೇಕಾದ ಪ್ರವೇಶ ತೆರಿಗೆಗೆ ತಕ್ಷಣದಿಂದ ದಿನಾಂಕ 31-3-2000ದವರೆಗೆ ಸಾರ್ವಜನಿಕರ ಹಿತದೃಷ್ಟಿಯಿಂದ ವಿನಾಯಿತಿ ನೀಡಿ ದಿನಾಂಕ 25-2-2000ದಂದು ಹೊರಡಿಸಿದ ಎಫ್‌ಡಿ 146 ಸಿಇಟಿ 99ನೇ ಸಂಖ್ಯೆ ಅಧಿಸೂಚನೆ.

1979 ಕರ್ನಾಟಕ ವಿಲಾಸ ತೆರಿಗೆ ಕಾಯ್ದೆಯ 20 ಎ ಕಲಮಿನ ಮೇರೆಗೆ.

13. ಹೊಸ ಪ್ರವಾಸೋದ್ಯಮ ಘಟಕವು ಪಾವತಿಸಬೇಕಾದ ವಿಲಾಸ ತೆರಿಗೆಗೆ ಸಾರ್ವಜನಿಕರ ಹಿತದೃಷ್ಟಿಯಿಂದ ತಕ್ಷಣದಿಂದ ವಿನಾಯಿತಿ ನೀಡಿ ದಿನಾಂಕ 12-11-99ರಂದು ಹೊರಡಿಸಿದ ಎಫ್‌ಡಿ 70 ಸಿಎಸ್‌ಎಲ್ 97(2)ನೇ ಸಂಖ್ಯೆಯ ಅಧಿಸೂಚನೆ/

1957ರ ಕರ್ನಾಟಕ ಕೃಷಿ ಆದಾಯ ತೆರಿಗೆ ಕಾಯ್ದೆಯ 63ನೇ ಕಲಮಿನ ಮೇರೆಗೆ.

14. ದಿನಾಂಕ 17-7-99ರ ಎಫ್‌ಡಿ 7 ಸಿಎಎಕ್ಸ್ 99ನೇ ಸಂಖ್ಯೆ ಅಧಿಸೂಚನೆಗೆ ತಿದ್ದುಪಡಿ ಮಾಡಿ ದಿನಾಂಕ 15-10-99ರಂದು ಹೊರಡಿಸಿದ ಎಫ್‌ಡಿ 7 ಸಿಇಎಕ್ಸ್ 99ನೇ ಸಂಖ್ಯೆ ಅಧಿಸೂಚನೆಗಳನ್ನು ಮಂಡಿಸುವುದು.

ಭಾರತ ಸಂವಿಧಾನದ ಅನುಚ್ಛೇದ 323(2)ರ ಪ್ರಕರಣದ ಮೇರೆಗೆ.

15. ಕರ್ನಾಟಕ ಲೋಕಾಯುಕ್ತದ 1998-99ನೇ ಸಾಲಿನ 13ನೇ ವಾರ್ಷಿಕ ಕ್ರೋಡೀಕೃತ ವರದಿ.

16. ಕರ್ನಾಟಕ ಲೋಕಸೇವಾ ಆಯೋಗದ 1998-99ನೇ ಸಾಲಿನ ವಾರ್ಷಿಕ ವರದಿಗಳನ್ನು ಮಂಡಿಸುವುದು.

1984ರ ಕರ್ನಾಟಕ ಲೋಕಾಯುಕ್ತದ ಅಧಿನಿಯಮ (127)ನೇ ಕಲಮಿನ ಮೇರೆಗೆ.

17. ಕರ್ನಾಟಕ ಲೋಕಾಯುಕ್ತದ ವಿಶೇಷ ವರದಿ ದಿನಾಂಕ: 3-12-98.

II ಶ್ರೀ ಮಲ್ಲಿಕಾರ್ಜುನ ಖರ್ಗೆ: (ಗೃಹ ಸಚಿವರು):

1964ರ ಕರ್ನಾಟಕ ಸಿನಿಮಾ (ನಿಯಂತ್ರಣ) ಕಾಯ್ದೆ ಕಲಂ 26ರ ಮೇರೆಗೆ.

ಮಕ್ಕಳ ಚಲನಚಿತ್ರ ಸಂಸ್ಥೆ, ಚೆನ್ನೈ, ಇವರಿಗೆ ಹಾಸನ ಜಿಲ್ಲೆಯಲ್ಲಿ ದಿನಾಂಕ 3-1-2000ದಿಂದ 14-1-2000ದವರೆಗೆ ಆಯ್ದ ಚಲನಚಿತ್ರ ಮಂದಿರಗಳಲ್ಲಿ ಐದನೇ (ವಿಶೇಷ ಬೆಳಗಿನ) ಪ್ರದರ್ಶನಕ್ಕಾಗಿ ಮಕ್ಕಳ ಚಲನಚಿತ್ರಗಳನ್ನು ಪ್ರದರ್ಶಿಸಲು ನಿಯಮ 21 ಎ ಗೆ ವಿನಾಯಿತಿ ನೀಡಿ ದಿನಾಂಕ 11-1-2000ದಂದು ಹೊರಡಿಸಿದ ಹೆಚ್‌ಡಿ 64 ಸಿಎನ್‌ಎ 99ನೇ ಸಂಖ್ಯೆ ಅಧಿಸೂಚನೆಯನ್ನು ಮಂಡಿಸುತ್ತೇನೆ.

III ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) ಮಾನ್ಯ ಅಧ್ಯಕ್ಷರೇ,

ಶ್ರೀ ಹೆಚ್.ಕೆ.ಪಾಟೀಲ್ (ಬೃಹತ್ ಹಾಗೂ ಮಧ್ಯಮ ನೀರಾವರಿ ಸಚಿವರು) ಅವರ ಪರವಾಗಿ

1956ರ ಕಂಪನಿ ಕಾಯ್ದೆ ಕಲಂ 619(ಎ) ಪ್ರಕರಣದ ಮೇರೆಗೆ.

ಕೃಷ್ಣಾ ಭಾಗ್ಯ ಜಲ ನಿಗಮದ 1998-99ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕ ಪರಿಶೋಧನಾ ವರದಿಯನ್ನು ಮಂಡಿಸುವುದು.

IV ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಮಾನ್ಯ ಅಧ್ಯಕ್ಷರೇ,

1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 232(3)ರ ಪ್ರಕರಣದ ಮೇರೆಗೆ.

1. ಗುಲ್ಬರ್ಗಾ ಜಿಲ್ಲಾ ಪಂಚಾಯತ್‌ನ 1997-98ನೇ ಸಾಲಿನ ವಾರ್ಷಿಕ ಲೆಕ್ಕ ಮತ್ತು ತನಿಖಾ ವರದಿ.

2. ಬಳ್ಳಾರಿ ಜಿಲ್ಲಾ ಪಂಚಾಯತ್‌ನ 1997-98ನೇ ಸಾಲಿನ ವಾರ್ಷಿಕ ಲೆಕ್ಕಗಳು ಮತ್ತು ಲೆಕ್ಕ ಪರಿಶೋಧನಾ ವರದಿ.

3. ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ನ 1997-98ನೇ ಸಾಲಿನ ವಾರ್ಷಿಕ ಲೆಕ್ಕ ಮತ್ತು ಪರಿಶೋಧನಾ ವರದಿ.

4. ಹಾಸನ ಜಿಲ್ಲಾ ಪಂಚಾಯತ್‌ನ 1997-98ನೇ ಸಾಲಿನ ತಪಾಸಣಾ ವರದಿ ಮತ್ತು ವಾರ್ಷಿಕ ಲೆಕ್ಕಗಳು.

5. ತುಮಕೂರು ಜಿಲ್ಲಾ ಪಂಚಾಯತ್‌ನ 1997-98ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ವರದಿ ಹಾಗೂ ಪ್ರಮಾಣೀಕೃತ ಪತ್ರ.

6. ಚಿತ್ರದುರ್ಗ ಜಿಲ್ಲಾ ಪಂಚಾಯತ್‌ನ 1997-98ನೇ ಸಾಲಿನ ವಾರ್ಷಿಕ ಲೆಕ್ಕಗಳು ಮತ್ತು ಲೆಕ್ಕ ಪರಿಶೋಧನಾ ವರದಿ.

7. ಧಾರವಾಡ ಜಿಲ್ಲಾ ಪಂಚಾಯತ್‌ನ 1997-98ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ತನಿಖಾ ವರದಿ.

1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 300ರ ಉಪ ಪ್ರಕರಣ (5)ರ ಪ್ರಕರಣದ ಮೇರೆಗೆ.

8. ದಾವಣಗೆರೆ ಜಿಲ್ಲಾ ಪಂಚಾಯತ್‌ನ 1998-99ನೇ ಸಾಲಿನ ವಾರ್ಷಿಕ ಆಡಳಿತ ವರದಿ.

9. ಕೊಡಗು ಜಿಲ್ಲಾ ಪಂಚಾಯತ್‌ನ 1998-99ನೇ ಸಾಲಿನ ವಾರ್ಷಿಕ ಆಡಳಿತ ವರದಿ

10. ಚಿಕ್ಕಮಗಳೂರು ಜಿಲ್ಲಾ ಪಂಚಾಯತ್‌ನ 1998-99ನೇ ಸಾಲಿನ ವಾರ್ಷಿಕ ಆಡಳಿತ ವರದಿ.

11. ಬೀದರ್ ಜಿಲ್ಲಾ ಪಂಚಾಯತ್‌ನ 1998-99ನೇ ಸಾಲಿನ ವಾರ್ಷಿಕ ಆಡಳಿತ ವರದಿ.

12. ಹಾವೇರಿ ಜಿಲ್ಲಾ ಪಂಚಾಯತ್‌ನ 1998-99ನೇ ಸಾಲಿನ ವಾರ್ಷಿಕ ಆಡಳಿತ ವರದಿಗಳನ್ನು ಮಂಡಿಸುತ್ತೇನೆ.

V ಶ್ರೀ ಬಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) ಅವರು:

1957ರ ಕರ್ನಾಟಕ ಮೋಟಾರ್ ವಾಹನ ತೆರಿಗೆ ಕಾಯಿದೆಯ ಕಲಂ 16(2)ರ ಮೇರೆಗೆ.

ಮಂಗಳೂರು ಸೇಂಟ್ ಜೋಸೆಫ್ ನಿವಾಸ್ ಇವರು ಹೊಂದಿರುವ ಕೆ.ಎ. 2632

ವಾಹನಕ್ಕೆ ಮೋಟಾರು ವಾಹನ ತೆರಿಗೆಯಲ್ಲಿ ವಿನಾಯಿತಿ ನೀಡಿರುವ ಸಂಬಂಧವಾಗಿ ದಿನಾಂಕ 7-12-99ರಂದು ಹೊರಡಿಸಿದ ಹೆಚ್‌ಟಿಡಿ 48 ಟಿಎಂಟಿ 99ನೇ ಸಂಖ್ಯೆ ಅಧಿಸೂಚನೆಯನ್ನು ಮಂಡಿಸುತ್ತೇನೆ.

VI ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು): ಮಾನ್ಯ ಅಧ್ಯಕ್ಷರೇ,

ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಹಾಗೂ ಮೂಲಭೂತ ಅಭಿವೃದ್ಧಿ ಸಚಿವರು ಅವರ ಪರವಾಗಿ)

1956ರ ಕಂಪನಿಗಳ ಕಾಯ್ದೆ 619 (ಎ) ಪ್ರಕರಣದ ಮೇರೆಗೆ.

1. ಚಾಮುಂಡಿ ಮೆಷಿನ್ ಟೂಲ್ಸ್ ಲಿಮಿಟೆಡ್ ಕಂಪನಿಯ 1997-98 ಮತ್ತು 1998-99ನೇ ಸಾಲಿನ ವಾರ್ಷಿಕ ವರದಿ.

2. ತುಂಗಭದ್ರ ಸ್ಟೀಲ್ ಪ್ರಾಡಕ್ಟ್ಸ್ ನಿಯಮಿತದ 1998-99ನೇ ಸಾಲಿನ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

VII ಶ್ರೀ ಹೆಚ್.ಪಿ.ಶ್ರೀಕಂಠಯ್ಯ (ಕಂದಾಯ ಸಚಿವರು) ಅವರು:

1964ರ ಕರ್ನಾಟಕ ಭೂ ಕಂದಾಯ ಅಧಿನಿಯಮ 194(1)(11)ನೇ ಪ್ರಕರಣದ ಮೇರೆಗೆ.

1. ಗದಗ ಜಿಲ್ಲೆಯ ಗದಗ ತಾಲ್ಲೂಕಿನ 10 ಗ್ರಾಮಗಳ 1998-99ನೇ ಸಾಲಿನ ಭೂ ಕಂದಾಯ ರೂ. 7,538.91ಗಳನ್ನು ಮನ್ನಾ ಮಾಡಿ ದಿನಾಂಕ 16-2-2000ದಂದು ಹೊರಡಿಸಿದ ಆರ್‌ಡಿ 374 ಟಿಆರ್‌ಎಂ 99ನೇ ಸಂಖ್ಯೆ ಅಧಿಸೂಚನೆ.

2. ಹಾವೇರಿ ಜಿಲ್ಲೆಯ ಹಾವೇರಿ ತಾಲ್ಲೂಕಿನ 41 ಗ್ರಾಮಗಳ 1998-99ನೇ ಸಾಲಿನ ಭೂ ಕಂದಾಯ ರೂ.26,776.71ಗಳನ್ನು ಮನ್ನಾ ಮಾಡಿ ದಿನಾಂಕ 8-12-99ರಂದು ಹೊರಡಿಸಿದ ಆರ್‌ಡಿ 317 ಟಿಆರ್‌ಎಂ 99ನೇ ಸಂಖ್ಯೆಯ ಅಧಿಸೂಚನೆ.

3. ಬೆಳಗಾಂ ಜಿಲ್ಲೆಯ ಅಥಣಿ ತಾಲ್ಲೂಕಿನ 22 ಗ್ರಾಮಗಳ 1998-99ನೇ ಸಾಲಿನ ಭೂ ಕಂದಾಯ ರೂ.25,392.55ಗಳನ್ನು ಮನ್ನಾ ಮಾಡಿ ದಿನಾಂಕ 20-12-99ರಂದು ಹೊರಡಿಸಿದ ಆರ್‌ಡಿ 318 ಟಿಆರ್‌ಎಂ 99ನೇ ಸಂಖ್ಯೆ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು): ಮಾನ್ಯ ಅಧಕ್ಷರೇ,

VIII ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ಸಚಿವರ ಪರವಾಗಿ)

ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಅಧಿನಿಯಮ (ಕರ್ನಾಟಕ) ಅಧಿನಿಯಮ 1986 ರ 22, 26 (2)ನೇ ಪ್ರಕರಣದ ಮೇರೆಗೆ

ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ 1998-99ನೇ ಸಾಲಿನ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

IX ಶ್ರೀ ಟಿ.ಬಿ.ಜಯಚಂದ್ರ (ಕೃಷಿ ಸಚಿವರು) ಅವರು:

1963ರ ಕರ್ನಾಟಕ ಕೃಷಿ ವಿಶ್ವವಿದ್ಯಾನಿಲಯದ ಕಾಯ್ದೆಯ 8(9)ನೇ ಪ್ರಕರಣದ ಮೇರೆಗೆ.

ಕೃಷಿ ವಿಶ್ವವಿದ್ಯಾಲಯದ ನಿವೃತ್ತ ಸಂಖ್ಯಾಧಿಕ ಗ್ರಂಥಾಲಯಾಧಿಕಾರಿ ಶ್ರೀ ಎಂ.ವೆಂಕಟಾಚಲಪ್ಪರವರ ಸೇವೆಯ ವಿಚಾರಕ್ಕೆ ಸಂಬಂಧದಲ್ಲಿ ದಿನಾಂಕ 9-4-99ರಂದು ಹೊರಡಿಸಿದ ಕೃತೋಇ 179 ಕೃವಿ 90ನೇ ಸಂಖ್ಯೆ ಆದೇಶವನ್ನು ಮಂಡಿಸುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು): ಮಾನ್ಯ ಅಧ್ಯಕ್ಷರೇ

X (ಡಾ:ಜಿ ಪರಮೇಶ್ವರ ಉನ್ನತ ಶಿಕ್ಷಣ ರಾಜ್ಯ ಸಚಿವರ ಪರವಾಗಿ)

1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಅಧಿನಿಯಮ ಕಲಂ 8(9) ಪ್ರಕರಣದ ಮೇರೆಗೆ.

1. ಮಂಗಳೂರು ವಿಶ್ವವಿದ್ಯಾಲಯದ ಎಸ್.ಸಿ : ಎಸ್.ಟಿ ನೌಕರರಿಗೆ ಸೂಪರ್ ನ್ಯೂಮರಿ ಹುದ್ದೆಗಳಲ್ಲಿ ಬಡ್ತಿ ನೀಡುವ ಸಂಬಂಧದಲ್ಲಿ ದಿನಾಂಕ 6-3-99ರಂದು ಹೊರಡಿಸಿದ ಇಡಿ 32 ಯುಡಿಪಿ 99ನೇ ಸಂಖ್ಯೆಯ ಆದೇಶ.

2. ಮಂಗಳೂರು ವಿಶ್ವವಿದ್ಯಾಲಯದ ನಿಟ್ಟಿಯ ಖನ್.ಎಂ.ಎ.ಎಂ. ಇನ್ಸ್ಟಿಟ್ಯೂಟ್ ವಿಭಜನೆಗೆ ಸಂಬಂಧಿಸಿದಂತೆ ದಿನಾಂಕ 12-3-99 ರಂದು ಹೊರಡಿಸಿದ ಇಡಿ 130 ಯುಡಿವಿ 98ನೇ ಸಂಖ್ಯೆಯ ಆದೇಶ.

3. ಮೈಸೂರು ವಿಶ್ವವಿದ್ಯಾಲಯದ ಕೋಚ್‌ಗಳಿಗೆ ಯು.ಜಿ.ಸಿ. ಅನುದಾನ ಮತ್ತು ಸಂಶೋಧನೆಸಹಾಯಕರಿಗೆ ಯು.ಜಿಸಿ. ವೇತನವನ್ನು ಮಂಜೂರು ಮಾಡುವ ಸಂಬಂಧವಾಗಿ ದಿನಾಂಕ 2-7-99ರಂದು ಹೊರಡಿಸಿದ ಇಡಿ 78 ಯುಎಂವಿ 98ನೇ ಸಂಖ್ಯೆಯ ಆದೇಶ.

4. ಮೈಸೂರು ವಿಶ್ವವಿದ್ಯಾಲಯದ ಡ್ರಾಫ್ಟ್‌ಮನ್ ಶ್ರೀ ಲಕ್ಷ್ಮೀಗೌಡರವರಿಗೆ ವೇತನ ಪುನರ್ ನಿಗಧೀಕರಣ ಮಾಡುವ ಸಂಬಧವಾಗಿ ದಿನಾಂಕ 13-7-99ರಂದು

ಹೊರಡಿಸಿದ ಇಡಿ 16 ಯುಎಂವಿ 98ನೇ ಸಂಖ್ಯೆಯ ಆದೇಶ.

5. ಕುವೆಂಪು ವಿಶ್ವವಿದ್ಯಾಲಯದಲ್ಲಿ ಸಹಾಯಕ ಕುಲಸಚಿವರ ಸೂಪರ್ ನ್ಯೂಮರರಿ ಹುದ್ದೆ ಸೃಷ್ಟಿಸುವ ಸಲುವಾಗಿ ನಿರ್ಣಯದ ಸಂಖ್ಯೆ 98:ಇ-7:15 ದಿನಾಂಕ 11-9-98 ಅನ್ನು ಹೊರಡಿಸಿದ್ದು, ಅದನ್ನು ರದ್ದುಗೊಳಿಸುವ ಸಂಬಂಧದಲ್ಲಿ ದಿನಾಂಕ 20-9-99ರಂದು ಹೊರಡಿಸಿದ ಇಡಿ 11 ಯುಡಿವಿ 98ನೇ ಸಂಖ್ಯೆ ಆದೇಶ.

6. ಮೈಸೂರು ವಿಶ್ವವಿದ್ಯಾಲಯದ ಕ್ರಿಶ್ಚಿಯಾನಿಟಿ ವಿಭಾಗದ ಉಪನ್ಯಾಸಕರಾದ ಡಾ: ಮೇರಿ ಜೋಸೆಫ್‌ರವರ ಬಡ್ತಿಗೆ ಸಂಬಂಧಿಸಿದಂತೆ ಹೊರಡಿಸಿದ ನಿರ್ಣಯವನ್ನು ರದ್ದುಗೊಳಿಸುವ ಸಂಬಂಧದಲ್ಲಿ ದಿನಾಂಕ 21-9-99ರಂದು ಹೊರಡಿಸಿದ ಇಡಿ 62 ಯುಎಂವಿ 99ನೇ ಸಂಖ್ಯೆ ಆದೇಶಗಳನ್ನು ಮಂಡಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು): ಮಾನ್ಯ ಅಧ್ಯಕ್ಷರೇ,

XI ಶ್ರೀ ಡಿ.ಬಿ.ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರ ಪರವಾಗಿ)

1956ರ ಕಂಪನಿಗಳ ಕಾಯ್ದೆಯ 619(ಎ) ಪ್ರಕರಣದ ಮೇರೆಗೆ.

ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮದ 1998-99ನೇ ಸಾಲಿನ ವಾರ್ಷಿಕ ಮತ್ತು ವಾರ್ಷಿಕ ಪರಿಶೀಲನಾ ವರದಿಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.